ಮಾಡಿದ್ದೇವೆಂಬುದನ್ನು ಹೇಳಲಿಲ್ಲ. ಆ ವಿಚಾರ ೩೦-೧೨-೭೯ರ ವೃತ್ತ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಭಾರತ ದೇಶದ ಪ್ರತಿನಿಧಿಗಳು ಅಲ್ಲಿ ಏನಿದ್ದಾರೆ ಅವರು ಇದರ ಬಗ್ಗೆ ವರದಿಯನ್ನು ತರಿಸಿಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಭಾರತ ಸರ್ಕಾರದವರು ಆ ಸರ್ಕಾರಕ್ಕೆ ವರದಿಯನ್ನು ಕಳುಹಿಸಿ ಕೊಟ್ಟಿದ್ದಾರೆಯೇ ಇಲ್ಲವೇ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದು ನಡೆದದ್ದು ನಿಜ, ಮತ್ತು ಅದಕ್ಕೆ ವಿವರವನ್ನು ಕೊಟ್ಟಿದ್ದೇನೆ. ಆದರೆ ಇರಾನಿನ ಪತ್ರಿಕೆಯಲ್ಲಿ ಏನು ಬಂದಿದೆ ಎಂದು ಹೇಳಿದ್ದಾರೆ ಅದಕ್ಕೆ ನಾವು ಜವಾಬ್ದಾರರಲ್ಲ. ಸತ್ಯ ಸಂಗತಿ ಏನು ನಡೆದಿದೆ ಎಂಬ ವರದಿಯನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ, ಅವರು ಅಲ್ಲಿಗೆ ವರದಿಯನ್ನು ಕಳುಹಿಸಿ ಕೊಟ್ಟಿರಬಹುದು.

ಶ್ರೀ ಎಂ. ಸಿ. ನಾನಯ್ಯ.—ಇದು ನಮ್ಮ ರಾಜ್ಯದಲ್ಲಿ ನಡೆದಿರತಕ್ಕ ಆಪಘಾತ. ಈ ಆಪಘಾತದಲ್ಲಿ ಸತ್ತಿರತಕ್ಕ ವ್ಯಕ್ತಿ ಇರಾನಿನವನು. ಈ ಸಂದರ್ಭದಲ್ಲಿ, ಇರಾನಿನ ಪತ್ರಿಕೆಯಲ್ಲಿ ಈ ವಿಷಯವನ್ನು ತಪ್ಪು ಪ್ರಚಾರ ಮಾಡಿದ್ದಾರೆಂದು ಮಾನ್ಯ ಮಿತ್ರರು ಹೇಳುತ್ತಿದ್ದಾರೆ. ಆದ್ದರಿಂದ, ಈ ಬಗ್ಗೆ ಪೋಲೀಸ್ ವರದಿ ಏನಿದೆ ಅದನ್ನು ತರಿಸಿಕೊಂಡು ಇರಾನಿನ ಎಂಬಾಸಿ ಯಾರಿದ್ದಾರೆ ಅವರೊಡನೆ ನೇರವಾಗಿ ಪತ್ರ ವ್ಯವಹಾರ ಮಾಡಿ ನಿಮ್ಮ ಪತ್ರಿಕೆಯಲ್ಲಿ ಪ್ರಕಟ ಮಾಡಿರುವುದು ತಪ್ಪು, ವಾಸ್ತವ ಸಂಗತಿ ಈ ರೀತಿ ಇದೆ ಎಂದು ಏಕೆ ತಿಳಿಸಬಾರದು ? ಇಲ್ಲದಿದ್ದರೆ ಇದು ಇಂಡಿಯಾ ದೇಶದ ಬಾಂಧವ್ಯವನ್ನು ತಪ್ಪಿಸುವುದಕ್ಕೆ ಕಾರಣವಾಗುತ್ತದೆ. ಆದ್ದರಿಂದ ಈ ಒಂದು ಸತ್ಯ ಸಂಗತಿಯನ್ನು ಅವರಿಗೆ ತಿಳಿಸಿ ಅವರ ಪತ್ರಿಕೆಯಲ್ಲಿ ತಪ್ಪು ಪ್ರಚಾರ ಮಾಡಿರುವುದರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಏನು ಹೇಳುತ್ತಾರೆ, ಅದು ನಿಜ. ಆದರೆ ರಾಜ್ಯ ಸರ್ಕಾರ ವಿದೇಶಿ ಸರ್ಕಾರಕ್ಕೆ ವ್ಯವಹಾರ ಮಾಡಲು ಸಾಧ್ಯವಿಲ್ಲ. ಅದು ಕೇಂದ್ರ ಸರ್ಕಾರದ ಮೂಲಕವೇ ಆಗಬೇಕು. ಈ ಬಗ್ಗೆ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಪುನಃ ಬೇಕಾದರೆ ಒಂದು ಪ್ರತಿಯನ್ನು ಕಳುಹಿಸಿ ಕೊಟ್ಟು ಸೂಕ್ತ ರೀತಿಯಲ್ಲಿ ಪ್ರಚಾರ ಮಾಡಿ ಎಂದು ತಿಳಿಸುತ್ತೇವೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮೂರು ಜನರು ಒಂದೇ ಸ್ಕೂಟರಿನಲ್ಲಿ ಪ್ರಯಾಣ ಮಾಡಿ ಅಪಘಾತಕ್ಕೀಡಾಗಿ ಸತ್ತರು. ಇವತ್ತಿಗೂ ಕೂಡ ಮೂರು ಜನ ಸ್ಕೂಟರಿನಲ್ಲಿ ವೇಗವಾಗಿ ಪ್ರಯಾಣ ಮಾಡುವುದನ್ನು ಕಾಣುತ್ತಿದ್ದೇವೆ. ಆದ್ದರಿಂದ, ಅಂಥವರ ಮೇಲೆ ಪೋಲೀಸು ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು.

ಶ್ರೀ ಆರ್. ಗುಂಡೂರಾವ್.—ಆಗಲಿ.

## MATTERS UNDER RULE 312

*re.—Promotional opportunities to Junior Engineers (Diploma Holders) in Karnataka State.*

† SRI PRABHAKAR TELKAR (Chittapur).—Mr. Speaker Sir, this is a problem of jonior engineers holding diplomas working for the last 25-30 years. Some of the diploma-holders who are working in Hyderabad Karnatak area and the old Mysore are have not got promotion according to the ratio fixed for 3500 Junior Engineers, only 200 posts are meant for the diploma-holders which is quite inadequate. There are 2,500 Assistant Engineers who are Graduates. These graduate engineers are getting promotinos without any difficulty. These diploma-holders turnout the same quantum of work compared to Graduate engineers. If we compare the statistics of

junior engineers in other States like Maharashtra, Tamil Nadu and Andhra Pradesh, in Maharashtra the percentage of promotion is 50%, Andhra Pradesh 25%, Central Public Works Department it is 50:50, Bihar it is 30%, Hariyana-Punjab it is about 80% but in Karnataka the percentage is hardly 16%. Taking into consideration the nature of work turned out by them and the number of year of service they have put in, I request the Government to increase the percentage of promotion. For want of promotional avenues these junior engineers are some what disgusted.

About 8 months ago, 30 vacancies were created and these vacancies are kept unfilled. I would therefore request the Government to fill up the post of 30 posts which are vacant for the last 8 months and allow these junior engineers to be promoted to these vacant posts. It is quite necessary the percentage of promotion for these junior engineers. I shall be grateful if the Government were to announce its policy in this regard.

SRI R. GUNDU RAO(Chief Minister).—There are about 3.500 Junior Engineers (Diploma Holders) working in the Public Works & Irrigation Dept. The Cardre and Recruitment Rules provide that 40% of the approximately 1,200 posts of Assistant Executive Engineers shall be filled up by direct recruitment, and 60% by promotion from amongst the Graduate Assistant Engineers and Non-Graduate Junior Engineers. Initially, when the C & R Rules were framed during 1960, about 17% of the promotional posts numbering about 70 were reserved for Diploma Holders. Having regard to the representations made by the Karnataka Engineering Service Association, representing Diploma Holders the promotional quota was increased to 80 posts during 1969, and thereafter in August 1973 the same was raised to 120 posts. This quota was further raised to 200 posts during August 1975.

It will be clear from these facts that the Government have been keen to ensure adequate promotional opportunities to the non-graduates. The increased quota of 200 posts now available to the Junior Engineers for promotion as Asst. Executive Engineers Division-II, accounts for nearly 28% of the total of 720 posts available for promotion to the rank of Assistant Executive Engineers. Action is already afoot for filling up the unfilled vacancies of Asst. Executive Engineers earmarked for non-graduates and the same is likely to be completed in about a month's time.

SRI PRABHAKAR TELKAR.—When compared to 3,500 junior engineers, the promotional facilities to these junior engineers is not adequate. The Chief Minister has just now said that promotional facilities have been increased from year to year and at present it

stands at 200 posts, it comes hardly to 16%. I have already submitted that in other States the promotional facilities are more than 25% or 30%. Will the Government think of increasing the promotional facilities to these junior engineers ?

SRI R. GUNDU RAO (Chief Minister).—We shall examine and see how best we can do.

## ನಿಯಮ ೩೧೬ರ ಕೆಳಗೆ ಪ್ರಸ್ತಾಪಿಸಲಾದ ವಿಷಯ

*re : Discrimination in the removal of Chairman several Corporations and Boards.*

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ) —ಮಾನ್ಯ ಅಧ್ಯಕ್ಷರೇ, ನಿನ್ನೆಯೇ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಈ ಕಡೆಗೆ ಸೆಳೆದಿದ್ದೇನೆ. ಆದರೂ ಇವತ್ತು ಅಜೆಂಡಾದಲ್ಲಿ ನಮೂದಾಗಿರುವುದರಿಂದ ಮತ್ತೊಮ್ಮೆ ಈ ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ವಹಿಸಿಕೊಂಡು ಅವರ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಮಂಡಲಿಗಳು ಮತ್ತು ಕಾರ್ಪೊರೇಷನ್‌ಗಳ ಖಾಸಗೀ ಅಧ್ಯಕ್ಷರುಗಳು ಮತ್ತು ಸದಸ್ಯರನ್ನು ತೆಗೆಯತಕ್ಕ ನೀತಿ ನಿರೂಪಣೆ ಮಾಡಿದರು. ತಾವಾಗಿಯೇ ರಾಜೀನಾಮೆ ಕೊಡದೇ ಇರತಕ್ಕ ಅಧ್ಯಕ್ಷರುಗಳನ್ನು ಸರ್ಕಾರದವರೇ ವಜಾ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಓದಿದ್ದೇವೆ. ಆದರೆ ಇನ್ನೂ ಕೆಲವು ಖಾಸಗಿ ಅಧ್ಯಕ್ಷರು ಮತ್ತು ಸದಸ್ಯರು ರಾಜೀನಾಮೆಯನ್ನೂ ನೀಡಿಲ್ಲ ಮತ್ತು ಸರ್ಕಾರವೂ ವಜಾ ಮಾಡಿಲ್ಲ. ಇದು ಏತಕ್ಕೆ ಆಗಿಲ್ಲ ? ಸರ್ಕಾರ ಏತಕ್ಕೋಸ್ಕರ ಈ ದ್ವಿಮುಖ ನೀತಿಯನ್ನು ಅನುಸರಿಸುತ್ತಿದೆ ಎಂಬುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ತಮ್ಮ ಅನುಮತಿ ಕೇಳುತ್ತಿದ್ದೇನೆ,

ಶ್ರೀ ಆರ್. ಗುಂಡೂರಾವ್.—ಏನು ಮಾಡಬೇಕು ಎಂಬುದನ್ನು ಹೇಳಿ. ಹಾಗೆ ಮಾಡೋಣ.

ಶ್ರೀ ಹೆಚ್.ಡಿ. ದೇವೇಗೌಡ.—ನೀವು ಖಾಸಗಿ ಸದಸ್ಯರನ್ನು ಮತ್ತು ಅಧ್ಯಕ್ಷರುಗಳನ್ನು ತೆಗೆಯುವುದಾದರೆ ಎಲ್ಲರನ್ನೂ ತೆಗೆಯಿರಿ, ಇಲ್ಲದಿದ್ದರೆ ಯಾರನ್ನೂ ಬೇಡ. ಕೆಲವರನ್ನು ತೆಗೆಯುವುದು, ಕೆಲವರನ್ನು ಬಿಡುವುದು ಏತಕ್ಕೆ ? ಕೆಲವು ಅನಗತ್ಯ ಮಂಡಲಿಗಳನ್ನು ತೆಗೆಯಬೇಕು ಎಂದು ನಿರ್ಣಯ ಮಾಡಿದ್ದೀರಿ, ಅದು ಸರ್ಕಾರ ಮಾಡುವ ನಿರ್ಣಯ. ಅನಾವಶ್ಯಕವಾದ ವೆಚ್ಚವನ್ನು ಕೈಬಿಡಬೇಕೆಂದು ಉತ್ತಮವಾದ ನಿರ್ಣಯ ಮಾಡಿದ್ದೀರಿ, ಆ ಬಗ್ಗೆ ನಾನು ಏನೂ ಹೇಳುವುದಿಲ್ಲ. ಒಪ್ಪಿಕೊಳ್ಳೋಣ. ಆದರೆ ಹಿಂದೆ ಇದ್ದಂಥ ಖಾಸಗಿ ಅಧ್ಯಕ್ಷರು ಮತ್ತು ಸದಸ್ಯರು ರಾಜೀನಾಮೆ ಕೊಡದಿರುವ ಕಡೆ ಆಂಥವರನ್ನು ಸರ್ಕಾರದವರೇ ವಜಾ ಮಾಡಿದ್ದೀರಿ. ಕೆಲವರನ್ನು ಮಾಡಿಲ್ಲ. ಇದು ಏತಕ್ಕೆ ಎಂದು ಕೇಳುತ್ತಿದ್ದೇನೆ. ಉದಾಹರಣೆಗೆ ಹೇಳುವುದಾದರೆ ನನ್ನ ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಯೂನಿಯನ್ ಎಂದು ಇದೆ. ಅದಕ್ಕೆ ಒಬ್ಬರು ಅಧ್ಯಕ್ಷರಿದ್ದು ಅವರಿಗೆ ಕಾರು ಮತ್ತಿತರ ಸೌಲಭ್ಯ ಕೊಟ್ಟಿದ್ದೀರಿ. ಅವರನ್ನು ಏತಕ್ಕೆ ವಜಾ ಮಾಡಲಿಲ್ಲ ? ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಎಲ್ಲರನ್ನೂ ತೆಗೆಯಬೇಕು ಎಂದು ನಿರ್ಣಯವನ್ನು ಮಾಡಿದ ಮೇಲೆ ಎಲ್ಲರನ್ನೂ ತೆಗೆಯಬೇಕು. ಇಲ್ಲದಿದ್ದರೆ ಯಾರನ್ನೂ ತೆಗೆಯಬಾರದು. ನಾನು ನಮ್ಮ ಜಿಲ್ಲೆಯ ವಿಷಯ ಉದಾಹರಣಾರ್ಥವಾಗಿ ಹೇಳಿದೆ ಅಷ್ಟೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮಾನ್ಯ ಅಧ್ಯಕ್ಷರೇ, ನಾನೂ ಸಹ ಇದರ ಬಗ್ಗೆ ಒಂದು ನೋಟಿಸನ್ನು ಕಳುಹಿಸಿದ್ದೆ. ಆದುದರಿಂದ, ಈಗಲೇ ಅದನ್ನು ಪ್ರಸ್ತಾಪ ಮಾಡಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಎಪಿಡೆಮಿಕ್ ಕಾಯಿಲೆಯ ಆಸ್ಪತ್ರೆ ಇದೆ. ಒಂದು ವರ್ಷದ ಹಿಂದೆ ಅಲ್ಲಿಂದ ನನಗೊಂದು ಪತ್ರ ಬಂತು. ಅದರಲ್ಲಿ ನನ್ನನ್ನು ಸದಸ್ಯನನ್ನಾಗಿ ನಾಮಕರಣ ಮಾಡಲಾಗಿದೆ ಎಂದು ತಿಳಿಸಲಾಗಿತ್ತು. ಅಲ್ಲಿ ತಿಂಗಳಿಗೊಮ್ಮೆ ಸಭೆ ನಡೆಯುತ್ತದೆ ಮತ್ತು ನಾನು ಅದಕ್ಕೆ ಹೋಗುತ್ತಿರುತ್ತೇನೆ. ೨೬ ಜನವರಿ ೮೦ ರಂದು ಅಲ್ಲಿಂದ ನನಗೊಂದು ನೋಟಿಸ್ ಬಂತು. ಅದರಲ್ಲಿ, ನನ್ನ ಆಸ್ಪತ್ರೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕೆಂದು ತಿಳಿಸಲಾಗಿತ್ತು. ಅದಕ್ಕೆ ನಾನು ರಾಜೀನಾಮೆ ನೀಡುವುದಿಲ್ಲ ; ರಾಜೀನಾಮೆ ಕೇಳಲು ನಿಮಗಿರುವ ಕಾರಣಗಳನ್ನು ತಿಳಿಸಿ ಎಂದು ಬರೆದೆ. ಸರ್ಕಾರ ಬದಲಾಗಿರುವುದರಿಂದ ನೀವು